**<u>ಸಿವಿಲ್ ನ್ಯಾಯಾಧೀಶರು ಮತ್ತು ಅಧಿಕ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ</u>**

**<u>ಕ್ರಿಮಿನಲ್ ಮೊಖದ್ದಮೆ ಸಂಖ್ಯೆ:*939/2017*</u>**

**<u>ಫಿರ್ಯಾದಿ:</u>** ರಾಜ್ಯದ ಪರ ಅಜ್ಜಂಪುರ ಆರಕ್ಷಕರು

**ವಿರುದ್ಧ**

**<u>ಆರೋಪಿಗಳು:</u>**

*1.* ಸ್ವಾಮಿ ಯಾನೆ ರಂಗಸ್ವಾಮಿ ಬಿನ್ ಹನಮಂತಪ್ಪ,
*19* ವರ್ಷ.

*2.* ಹನುಮಂತಪ್ಪ ಬಿನ್ ಆಂಜನಪ್ಪ,
*45* ವರ್ಷ.

*3.* ನಾಗರಾಜ ಬಿನ್ ಆಂಜನಪ್ಪ,
*40* ವರ್ಷ.

*4.* ಆಂಜನಪ್ಪ ಬಿನ್ ದಿಃ ನಾಗಪ್ಪ,
*60* ವರ್ಷ.

ಎಲ್ಲರ ವಾಸಃ ಶಿರಗಲಿ ಗ್ರಾಮ,
ಶಿವನಿ ಹೋಬಳಿ,
ತರೀಕೆರೆ ತಾಲ್ಲೂಕು.

**<u>ದೋಷಾರೋಪಣೆ</u>**

ಶ್ರೀಮತಿ ಪವಿತ್ರ.ಎಂ.ಡಿ ಬಿ.ಎ. ಎಲ್.ಎಲ್.ಬಿ, ಸಿವಿಲ್ ನ್ಯಾಯಾಧೀಶರು ಮತ್ತು ಅ.ಪ್ರ.ದ.ನ್ಯಾ.ದಂ., ತರೀಕೆರೆ ಆದ ನಾನು ನಿಮ್ಮಗಳ ವಿರುದ್ಧ ಮಾಡುವ ದೋಷಾರೋಪಣೆಗಳು ಏನೆಂದರೆಃ-

ದಿನಾಂಕ *16.09.2017* ರಂದು ರಾತ್ರಿ *9-00* ರ ಸಮಯದಲ್ಲಿ ಅಜ್ಜಂಪುರ ಪೊಲೀಸ್ ಠಾಣಾ ಸರಹದ್ದಿನ ಶಿರಗಲಿ ಗ್ರಾಮದಲ್ಲಿ ಚಾಸಾ.*1* ರವರು ತಮ್ಮ ಚಿಲ್ಲರೆ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದಾಗ, ಆದೇ ಸಮಯದಲ್ಲಿ ಆರೋಪಿತರಾದ ನಿಮ್ಮಗಳ ಪೈಕಿ *1*ನೇ ಆರೋಪಿ ಸೀನ ಎಂಬುವವರೊಂದಿಗೆ ವಿನಾಕಾರಣ ಜಗಳವಾಡುತ್ತಿದ್ದುದ್ದನ್ನು ನೋಡಿ ಚಾಸಾ.*1* ರವರು *1*ನೇ ಆರೋಪಿಗೆ ನಮ್ಮ ಅಂಗಡಿ ಮುಂಭಾಗ ಗಲಾಟೆ ಮಾಡಬೇಡಿ ಎಂದು ಹೇಳಿ ಅವರುಗಳನ್ನು

ಅಂಗಡಿಯ ಮುಂಭಾಗದಿಂದ ಕಳುಹಿಸಿದ್ದು, ನಂತರ ಎಲ್ಲಾ ಆರೋಪಿಗಳು ಸಮಾನ ಉದ್ದೇಶದಿಂದ ಸದರಿ ಸ್ಥಳಕ್ಕೆ ಬಂದವರೇ ಚಾಸಾ.*1* ರವರಿಗೆ ಅಂಗಡಿಯಿಂದ ಹೊರಗೆ ಬಾರೋ ಸೂಳೇಮಗನೇ ಮತ್ತು ಬೋಳಿಮಗನೆ ಎಂದು ಆವಾಚ್ಯ ಶಬ್ಧಗಳಿಂದ ಬೈದಿದ್ದು, ಇದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ *504* ಸಹವಾಚಕ ಕಲಂ *34* ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, ನಿಮ್ಮ ಪೈಕಿ *1* ಮತ್ತು *2*ನೇ ಆರೋಪಿತರು ಚಾಸಾ.*1* ರವರಿಗೆ ಬಿದಿರಿನ ದೊಣ್ಣೆಗಳಿಂದ ಎಡಕೈ ರಟ್ಟೆಗೆ ಮತ್ತು ಮೊಣಕೈಗೆ ಹೊಡೆದು ಗಾಯ ಉಂಟು ಮಾಡಿದ್ದು, ಇದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ *324* ಸಹವಾಚಕ ಕಲಂ *34* ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, ನಿಮ್ಮ ಪೈಕಿ *3* ಮತ್ತು *4*ನೇ ಆರೋಪಿತರು ಚಾಸಾ.*1* ರವರನ್ನು ನೆಲಕ್ಕೆ ಬೀಳಿಸಿ, ಕಾಲುಗಳಿಂದ ತುಳಿದಿದ್ದು, ಇದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ *326* ಸಹವಾಚಕ ಕಲಂ *34* ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಕೊನೆಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, ಚಾಸಾ.*1* ರವರಿಗೆ ನಮ್ಮಗಳ ವಿಚರಕ್ಕೆ ಬಂದರೆ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿದ್ದು, ಇದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ *506* ಸಹವಾಚಕ

ಕಲಂ *34* ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ *26* ನೇ ಜುಲೈ *2018* ಸಹಿ/-

*(ಪವಿತ್ರ.ಎಂ.ಡಿ)*
***ಸಿವಿಲ್ ನ್ಯಾಯಾಧೀಶರು ಮತ್ತು ಅಪ್ರದನ್ಯಾದಂ,***
***ತರೀಕೆರೆ.***